SHREE Mahalakshmi SWEETS
ಮೈಸೂರು
ರಂಗ ಮೈಲ್, ಕಲ್ಯಾಣಗಿರಿ. ☎ 2489067
ಹಾ & ಅರಮನೆ ರಸ್ತೆ. ☎ 2443553
ರಂಗ ಮೈಲ್, ರಿಂಗ್ ರೋಡ್ ರಸ್ತೆ, ಹಂ. ಬಿ ಮೇನ್ಸ್. ☎ 4266670
ಅರಮನೆ ರಸ್ತೆ ಸುರಭಿಮಳಿಗೆ. ☎ 2441067
ದೊಡ್ಡ ಗಡಿಯಾರ ಎದುರು. ☎ 2443067
ಕೃಷ್ಣರಾಜ ರಸ್ತೆ, ಹೆಬ್ಬಾಳ. ☎ 2410067
ಸಿಲ್ಕ್ ಬಟ್ಟೆಅಂಗಡಿ ಎದುರು, ಜಿ ಎಸ್ ಟಿ. ☎ 2430067
ಬೆಂಗಳೂರು : ಎಂ ಟಿ ರಸ್ತೆ. 2400047 ಶಾಖೆ ಶೀಘ್ರದಲ್ಲಿ ಪ್ರಾರಂಭ

ಆಂದೋಲನ

ದಿನಪತ್ರಿಕೆ

ಸಂಪಾದಕ : ರಾಜಶೇಖರ ಕೋಟಿ

ಸಿಗ್ಮಾ ಆಸ್ಪತ್ರೆ
ದಿ ಹೀಲಿಂಗ್ ಟಚ್
ಸಿ/8ಡಿ, ಹೊಸಬಡಾವಣೆ – ಸರಸ್ವತಿಪುರಂ ರಸ್ತೆ, ಮೈಸೂರು–09
☎ : 0821- 4266661, 4266662, Mob : 9108028661
ಸಂಪೂರ್ಣ ಮಾಹಿತಿಗಾಗಿ ಸಿಗ್ಮಾ ಆಸ್ಪತ್ರೆಯ ಆಹಾರ ತಜ್ಞರನ್ನು ಸಂಪರ್ಕಿಸಿ

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವ ಸರ್ಕಾರದ ೧೫ ಆದರ್ಶ ವಿದ್ಯಾಲಯಗಳಿಗೆ ಶೀಘ್ರ ಪೀಠೋಪಕರಣ ಒದಗಿಸಲಾಗುವುದು ಎಂದು ಸಂಸದ ಆರ್.ಧ್ರುವನಾರಾಯಣ ಭರವಸೆ ನೀಡಿದರು.

ಆದರ್ಶ ವಿದ್ಯಾಲಯಕ್ಕೆ ಪೀಠೋಪಕರಣ ಭರವಸೆ

ಆಭರಣ ಪ್ರದರ್ಶನಕ್ಕೆ ಪ್ರಣೀತಾ ಚಾಲನೆ

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಆಯೋಜಿಸಿದ್ದ ಭಾರತದ ದೊಡ್ಡ–ಉತ್ತಮ ಆಭರಣಗಳ ಪ್ರದರ್ಶನ, ಮಾರಾಟವನ್ನು ಚಿತ್ರನಟಿ ಪ್ರಣೀತಾ ಸುಭಾಷ್ ಉದ್ಘಾಟಿಸಿದರು.

ಸಂಪುಟ: ೪೬ ಸಂಚಿಕೆ: ೨೩೫, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೧ ☽ ಏಕಾದಶಿ– ಶೂರ್ವಾಷಾಢ, ಶನಿವಾರ, ಸೆ.೨, ೨೦೧೭, ದೂರವಾಣಿ: ೨೪೪೯೫೧೧, ೨೪೪೯೫೧೦೪, ೨೪೪೯೫೧೦೫, ಫ್ಯಾಕ್ಸ್: ೨೪೪೯೫೧೦೩, ಪುಟ: ೧೨, ರೂ. ೩

ವಿಐಯು ಇಂಜಿನಿಯರಿಂಗ್ ಕಾಲೇಜು ಬಂದ್

ಮೈಸೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ (ವಿಟಿಯುಸು) ವಿದ್ಯಾರ್ಥಿ ವಿರೋಧಿ ನೀತಿ ಖಂಡಿಸಿ ರಾಜ್ಯಾದ್ಯಂತ ವಿಟಿಯುಸು ಸಂಯೋಜಿತ ಕಾಲೇಜುಗಳನ್ನು ಶುಕ್ರವಾರ ಬಂದ್ ಮಾಡಲಾಗಿತ್ತು. ಮೈಸೂರು ನಲ್ಲಿಯೂ ಎಐಡಿಎಸ್‌ಓ ಮತ್ತು ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿ ಗಳು ತರಗತಿ ಬಹಿಷ್ಕರಿಸಿ ಕಾಲೇಜು ಬಂದಗೆ ಸಹಕರಿಸಿ ದರು.

ಪರದಿ ಪುಟ ೩

ಟಿವಿಎಸ್ ಹೊಸ ಘಟಕ; ೧೧೧೦ ಕೋಟಿ ಹೂಡಿಕೆ

ಬೆಂಗಳೂರು: ನಂಜನಗೂಡಿನ ಬಳಿ ೧೧೧೦ ಕೋಟಿ ರೂ. ಹೂಡಿಕೆ ಸೇರಿದಂತೆ ರಾಜ್ಯದ ೪ ಕಡೆ ೩೫೯೬ ಕೋಟಿ ರೂ. ವೆಚ್ಚದಲ್ಲಿ ಉದ್ಯಮೆಗಳನ್ನು ಸ್ಥಾಪಿಸಲು ಪ್ರಮುಖ ಕಂಪನಿಗಳಿಗೆ ರಾಜ್ಯ ಸರ್ಕಾರ ಶುಕ್ರವಾರ ಅನುಮತಿ ನೀಡಿದೆ. ೪ ಕಂಪನಿಗಳಿಂದ ಒಟ್ಟು ೩೮೪೨ ಉದ್ಯೋಗಗಳು ಸೃಷ್ಟಿಯಾಗಲಿವೆ.

ಪರದಿ ಪುಟ ೮

ಬಕ್ರೀದ್ ಸಂಭ್ರಮ: ಕುರಿಗಳ ದಾಖಲೆ ಮಾರಾಟ

ಮೈಸೂರು: ತ್ಯಾಗ ಮತ್ತು ಬಲಿದಾನದ ಸಂಕೇತವಾಗಿ ಮುಸ್ಲಿಮರು ಆಚರಿಸುವ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲೇ ೬೦ ಕೋಟಿ ರೂಗೂ ಹೆಚ್ಚು ಕುರಿಗಳ ದಾಖಲೆ ವಹಿವಾಟು ನಡೆದಿದೆ.

ಪರದಿ ಪುಟ ೫

Saturday 2 September 2017
ಆಂದೋಲನ
ಸುದ್ದಿಗಾಗಿ
andolana@gmail.com

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 388
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ ಜ್ಯೂವೆಲ್ಸ್
₹2791
1 ಗ್ರಾಂಗೆ
ಹಿಂದಿನ ದಿನದ ದರ
THOLASI JEWELS
ಆರೋಹ ರೋಡ್, ಮೈಸೂರು
Ph: 2521926, 2441926

ಸಚಿವರಾಗಿ ರೇವಣ್ಣ, ತಿಮ್ಮಾಪುರ, ಗೀತಾ ರಾಜಭವನದಲ್ಲಿ ಪ್ರಮಾಣ ವಚನ

ಗೀತಾರಿಗೆ ಸಕ್ಕರೆ, ಸಣ್ಣ ಕೈಗಾರಿಕೆ

ರಾಜಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ನೂತನ ಸಚಿವರಾಗಿ ಗೀತಾ ಮಹದೇವಪ್ರಸಾದ್ ಪ್ರಮಾಣ ವಚನ ಸ್ವೀಕರಿಸಿದರು.

ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಗೈರು

ಬೆಂಗಳೂರು,ಸೆ.೧– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ನೂತನ ಸಚಿವರಾಗಿ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ಶಾಸಕಿ ಡಾ.ಗೀತಾ ಮಹದೇವ ಪ್ರಸಾದ್ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನ ಪರಿಷತ್ ಸದಸ್ಯರಾದ ಎಚ್.ಎಂ.ರೇವಣ್ಣ ಹಾಗೂ ಆರ್.ಬಿ.ತಿಮ್ಮಾಪುರ ಅವರೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸಂಜೆ ೫ ಗಂಟೆಯಲ್ಲಿ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ವಜುಭಾಯಿ ರೂಡಭಾಯಿ ವಾಲಾ ಪ್ರತಿಜ್ಞಾಧಿಧಿ ಬೋಧಿಸಿದರು.

ಮೊದಲಿಗೆ ಹಿರಿಯ ನಾಯಕ ಎಚ್.ಎಂ.ರೇವಣ್ಣ, ನಂತರ ಆರ್.ಬಿ. ತಿಮ್ಮಾಪುರ ಅವರು ಸಂಪುಟ ದರ್ಜೆ ಸಚಿವರಾಗಿ, ಬಳಿಕ ರಾಜ್ಯ ಖಾತೆ ಸಚಿವರಾಗಿ ಗೀತಾ ಮಹದೇವಪ್ರಸಾದ್ ಪ್ರಮಾಣ ವಚನ ಸ್ವೀಕರಿಸಿದರು. ೧೫ ನಿಮಿಷದಲ್ಲಿ ಸಮಾರಂಭ ಪೂರ್ಣಗೊಂಡಿತು. ನೂತನ ಸಚಿವರನ್ನು ರಾಜ್ಯಪಾಲರಾದ ವಜುಭಾಯಿ ರೂಡಭಾಯಿ ವಾಲಾ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊದಲಿಗೆ ಅಭಿನಂದಿಸಿದರು.

ನೂತನ ಸಚಿವರಾದ ಡಾ.ಗೀತಾ ಮಹದೇವಪ್ರಸಾದ್ ಅವರಿಗೆ ಸಕ್ಕರೆ ಮತ್ತು ಸಣ್ಣ ಕೈಗಾರಿಕೆ ಖಾತೆ ನೀಡಲಾಗಿದ್ದು, ಎಚ್.ಎಂ.ರೇವಣ್ಣ ಅವರಿಗೆ ಸಾರಿಗೆ, ಆರ್.ಬಿ.ತಿಮ್ಮಾಪುರ್ ಅವರಿಗೆ ಅಬಕಾರಿ ಖಾತೆ ನೀಡಲಾಗಿದೆ.

ಡಾ.ಗೀತಾ ಅವರಿಗೆ ರಾಜ್ಯ ಖಾತೆ ಸಚಿವ ಸ್ಥಾನ ನೀಡಲಾಗಿದ್ದು, ರೇವಣ್ಣ ಮತ್ತು ತಿಮ್ಮಾಪುರ ಅವರಿಗೆ ಸಂಪುಟ ದರ್ಜೆ ಸ್ಥಾನ ನೀಡಲಾಗಿದೆ.

ಡಾ.ಗೀತಾ ಅವರು ಮಲೆಮಹದೇಶ್ವರರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರೇವಣ್ಣ ಮತ್ತು ತಿಮ್ಮಾಪುರ ಅವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

೮

> ಮಹದೇವಪ್ರಸಾದ್ ಅವರು ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಜಾಸಗರದಲ್ಲಿ ಆರಂಭಗೊಳ್ಳಲು ಕಾರಣರಾದರು. ಅಷ್ಟೇ ಅಲ್ಲ, ಇಡೀ ಜಿಲ್ಲೆಯಲ್ಲಿ ಬದಲಾವಣೆ ತಂದರು. ಅವರಿಂದ ನಡೆಯುತ್ತಿದ್ದ ಅಭಿವೃದ್ಧಿ ಕೆಲಸಗಳನ್ನು ಅವರ ಪತ್ನಿ ಮುಂದುವರಿಸಬಲ್ಲಳು, ಆಕೆಯಲ್ಲಿ ಆ ಸಾಮರ್ಥ್ಯವಿದೆ ಎಂಬ ನಂಬಿಕೆ, ವಿಶ್ವಾಸದಿಂದಲೇ ಸಿಎಂ ಮತ್ತು ಕಾಂಗ್ರೆಸ್ ವರಿಷ್ಠರು ನನಗೆ ಸಚಿವ ಸ್ಥಾನದ ಜವಾಬ್ದಾರಿ ವಹಿಸಿದ್ದಾರೆ. ಅವರ ನಿರೀಕ್ಷೆಗಳು ಹುಸಿಯಾಗದಂತೆ, ಜಿಲ್ಲೆಯ ಜನರ ಅಶಯಕ್ಕೆ ತಕ್ಕಂತೆಯೇ ಕೆಲಸ ನಿರ್ವಹಿಸಲು ಶ್ರಮಿಸುವೆ.
>
> -ಡಾ.ಗೀತಾ ಮಹದೇವಪ್ರಸಾದ್

ನೂತನ ಸಚಿವರಾಗಿ ಎಚ್.ಎಂ.ರೇವಣ್ಣ ಅವರಿಂದ ಪ್ರಮಾಣವಚನ.

ನೂತನ ಸಚಿವರಾಗಿ ತಿಮ್ಮಾಪುರ ಅವರಿಂದ ಪ್ರಮಾಣವಚನ.

ಮೈಸೂರು ಕುವೆಂಪುನಗರದಲ್ಲಿನ ನಿವಾಸದಲ್ಲಿ ಮಹದೇವಪ್ರಸಾದ್ ಭಾವಚಿತ್ರಕ್ಕೆ ನಮಿಸುತ್ತಿರುವ ಪತ್ನಿ ಡಾ. ಗೀತಾ ಮತ್ತು ಮಕ್ಕಳಾದ ಗಣೇಶ್ ಪ್ರಸಾದ್

ಹೊಸ ಹೊಣೆಗಾರಿಕೆ...

ರಾಮಲಿಂಗಾರೆಡ್ಡಿ
ಗೃಹ ಸಚಿವರು

ರಮೇಶ್ ಜಾರಕಿಹೊಳಿ
ಸಹಕಾರ

ಸಂತೋಷ್ ಲಾಡ್
ಕೌಶಲ ಅಭಿವೃದ್ಧಿ

ಸಂಪುಟ ದರ್ಜೆಗೆ
ಎಚ್.ಎಂ.ರೇವಣ್ಣ
ತಿಮ್ಮಾಪುರ
ರಮೇಶ್ ಜಾರಕಿಹೊಳಿ
ಸಂತೋಷ್ ಲಾಡ್
ಪ್ರಿಯಾಂಕ್ ಖರ್ಗೆ
ಶಾಮನೂರ್ ಶಿವಶಂಕರಪ್ಪ
ಈಶ್ವರ ಖಂಡ್ರೆ
ರುದ್ರಪ್ಪ ಲಮಾಣಿ

ಎರಡೆರಡು ವಿಳಾಸ, ಪ್ರಯಾಣಭತ್ಯೆ ಅಕ್ರಮ ವಿರುದ್ಧ ರಾಜ್ಯಪಾಲರಿಗೆ ಬಿಜೆಪಿ ದೂರು

ತಿಮ್ಮಾಪುರ ಸೇರಿದಂತೆ ಎಂಟು ಪರಿಷತ್ ಸದಸ್ಯರ ವಜಾಕ್ಕೆ ಆಗ್ರಹ

ಬೆಂಗಳೂರು: ಎರಡು ಬೇರೆ ವಿಳಾಸ ನೀಡಿ ಬಿಬಿಎಂಪಿ ಮಹಾಪೌರರ ಚುನಾವಣೆಯಲ್ಲಿ ಮತದಾನ ಹಾಗೂ ಅಕ್ರಮವಾಗಿ ಪ್ರವಾಸ ಭತ್ಯೆ ಪಡೆದಿರುವ ಆರೋಪಕ್ಕೆ ಸಂಬಂಧಿಸಿ ೮ ವಿಧಾನಪರಿಷತ್ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ನಿಯೋಗ ಶುಕ್ರವಾರ ರಾಜ್ಯಪಾಲರಿಗೆ ದೂರು ನೀಡಿತು.

ವಿಧಾನಸಭೆ ವಿಪಕ್ಷನಾಯಕ ಜಗದೀಶ್ ಶೆಟ್ಟರ್ ಅವರ ನೇತೃತ್ವದ ನಿಯೋಗ ಶುಕ್ರವಾರ ರಾಜಭವನಕ್ಕೆ ತೆರಳಿ ರಾಜ್ಯಪಾಲ ವಜುಭಾಯಿವಾಲಾ ಅವರನ್ನು ಭೇಟಿ ಮಾಡಿ, ಸುಳ್ಳು ವಿಳಾಸ ನೀಡಿ ಚುನಾವಣೆಯಲ್ಲಿ ಮತದಾನ ಮಾಡಿದ ೮ ಮಂದಿ ಪರಿಷತ್ ಸದಸ್ಯರನ್ನು ವಜಾ ಮಾಡಿ ಎಂದು ಮನವಿ ಸಲ್ಲಿಸಿತು.

ಜನಪ್ರತಿನಿಧಿ ಕಾಯಿದೆಯ ಉಲ್ಲಂಘನೆ ಮತ್ತು ಚುನಾವಣಾ ಆಯೋಗಕ್ಕೆ ಸುಳ್ಳು ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಹಾಗೂ ನಕಲಿ ಪ್ರಮಾಣಪತ್ರ ನೀಡಿದ್ದಾರೆ.

ದಲಿತ ಸಚಿವನಾಗುವುದನ್ನು ಸಹಿಸದ ಮನುವಾದಿಗಳು: ತಿಮ್ಮಾಪುರ

ಬೆಂಗಳೂರು: ಒಬ್ಬ ದಲಿತ ಸಚಿವ ಸ್ಥಾನಕ್ಕೇರುವುದನ್ನು ಮನುವಾದಿಗಳು ಸಹಿಸದೇ, ನನ್ನ ವಿರುದ್ಧ ರಾಜ್ಯಪಾಲರಿಗೆ ಸುಳ್ಳು ದೂರು ನೀಡಿದ್ದಾರೆ ಎಂದು ಆರ್.ಬಿ.ತಿಮ್ಮಾಪುರ ಹೇಳಿದ್ದಾರೆ.

ಬಿಬಿಎಂಪಿ ಮಹಾಪೌರ ಚುನಾವಣೆ ವೇಳೆ ತಪ್ಪು ವಿಳಾಸ ನೀಡಿ ಮತದಾನ ಮಾಡಿರುವ ಆರೋಪ ಕುರಿತು ಪ್ರಮಾಣ ವಚನ ಸ್ವೀಕಾರಕ್ಕೂ ಮುನ್ನ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಯಾವುದೇ ತಪ್ಪು ಮಾಡದಿದ್ದರೂ ಒಬ್ಬ ದಲಿತ ಮಂತ್ರಿಯಾಗುತ್ತಿರುವುದನ್ನು ಬಿಜೆಪಿ ವಿರೋಧಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ವಿಳಾಸ ವಿವಾದ: ರಫು ಆಚಾರ್ ಕಿಡಿ ೮

ಅಡುಗೆ ಅನಿಲ ೭ ರೂ. ತುಟ್ಟಿ

೧೪ ತಿಂಗಳಲ್ಲಿ ಸಿಲಿಂಡರ್ ಬೆಲೆ ೬೮ ರೂ. ಏರಿಕೆ

ಹೊಸದಿಲ್ಲಿ,ಸೆ.೧– ರಾಜಧಾನಿ ದಿಲ್ಲಿಯಲ್ಲಿ ಅಡುಗೆ ಅನಿಲ ಸಿಲಿಂಡರ್ ದರ ೭ ರೂ. ಏರಿಕೆಯಾಗಿದೆ. ಸೆ.೧ರಂದಲೇ ಪರಿಷ್ಕೃತ ದರ ಜಾರಿಗೆ ಬಂದಿದೆ.

ಹೊಸದಿಲ್ಲಿಯಲ್ಲಿ ೧೪.೨ ಕೆಜಿ ಅನಿಲ ಸಿಲಿಂಡರ್ ಬೆಲೆ ೪೭೯.೩ ರೂ.ಗಳಷ್ಟಿದ್ದುದು, ಈಗ ೪೮೬.೧೮ಕ್ಕೆ ಏರಿಕೆಯಾಗಿದೆ.

ಈ ಹಿಂದೆಯೇ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಪ್ರತಿ ತಿಂಗಳೂ ೪ ರೂ. ಏರಿಸುವಂತೆ ಪೆಟ್ರೋಲಿಯಂ ಸಚಿವಾಲಯ ಸರ್ಕಾರಿ ತೈಲ ಕಂಪನಿಗಳಿಗೆ ಸೂಚನೆ ನೀಡಿತ್ತು.

ಸಬ್ಸಿಡಿ ಪಟ್ಟಿಯಿಂದ ನಿಧಾನವಾಗಿ ಗ್ಯಾಸ್ ಸಿಲಿಂಡರ್ ತೆರವುಗೊಳಿಸಲು ಕ್ರಮ ಜರುಗಿಸುವಂತೆಯೂ ಸೂಚಿಸಿತ್ತು.

೮

ಗೊತ್ತೇ ಆಗದಂತೆ ಪೆಟ್ರೋಲ್ ದುಬಾರಿ!

ಹೊಸದಿಲ್ಲಿ: ಕಳೆದ ಜುಲೈ, ಆಗಸ್ಟ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕ್ರಮವಾಗಿ ಪ್ರತಿ ಅಂಬರ್‌ಗೆ ೬ ರೂ. ಮತ್ತು ೩.೬೭ ರೂ. ಏರಿಕೆಯಾಗಿದೆ. ಅಂದರೆ, ಈ ಎರಡೂ ತೈಲಗಳ ಬೆಲೆ ನಿತ್ಯವೂ ಬದಲಾಗುತ್ತಾ, ಸೈಸೆಗಳ ಲೆಕ್ಕದಲ್ಲಿ ಏರಿಕೆಯಾಗುತ್ತಲೇ ಇದೆ. ಗ್ರಾಹಕರ ಅರಿವಿಗೇ ಬಾರದ ಹಾಗೆ ಜೇಬಿಗೆ ಕತ್ತರಿ ಹಾಕಲಾಗುತ್ತಿದೆ.

ನಿತ್ಯ ದರ ಪರಿಷ್ಕರಣೆ ಪರಿಣಾಮದಿಂದಾಗಿ ಪೆಟ್ರೋಲ್ ಬೆಲೆ ಕಳೆದ ೩ ವರ್ಷಗಳ ಗರಿಷ್ಠ ಮಟ್ಟ ಮುಟ್ಟಿದೆ. ಸದ್ಯದ ಬೆಲೆ ೨೦೧೪ರ ಆಗಸ್ಟ್‌ನಲ್ಲಿದ್ದ ಮಟ್ಟಕ್ಕೆ ಬಂದಿದೆ.೩ ವರ್ಷಗಳಲ್ಲಿಯೇ ಗರಿಷ್ಠ ಮಟ್ಟಕ್ಕೆ ತಲುಪಿದೆ. ಬೆಲೆ ೨೦೧೪ರ ಆಗಸ್ಟ್‌ನಲ್ಲಿದ್ದ ಮಟ್ಟಕ್ಕೆ ಬಂದಿದೆ.

ಬಿಎಸ್‌ವೈ ಪುತ್ರನ ಕಾರು ಡಿಕ್ಕಿ: ಯುವಕ ಸಾವು

ಹೊನ್ನಾಳಿ ಬಳಿ ಅಪಘಾತ

ದಾವಣಗೆರೆ,ಸೆ.೧– ಶಿಕಾರಿಪುರ ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ ಅವರು ಪ್ರಯಾಣಿಸುತ್ತಿದ್ದ ಕಾರು ಡಿಕ್ಕಿ ಹೊಡೆದು ಯುವಕನೊಬ್ಬ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಹೋಬಳಿಯ ಮಾದಾಪುರ ಬಳಿ ಅಪಘಾತ ಸಂಭವಿಸಿದ್ದು, ಮೃತಪಟ್ಟವನನ್ನು ಮಾದಾಪುರದ ನಿವಾಸಿ ಸುರೇಶ(೨೪) ಎಂದು ಗುರುತಿಸಲಾಗಿದೆ.

೮

ಜನಪ್ರಿಯ ಸಿನಿಮಾ ತಾರೆ ಮತ್ತು ಬ್ರಾಂಡ್ ರಾಯಭಾರಿ – ಜ್ಯುವೆಲ್ಲರಿ ಆಫ್ ಇಂಡಿಯಾ, ಮೈಸೂರು – 2017
ಪ್ರಣೀತಾ ಸುಭಾಷ್ ಸ್ವಾಗತಿಸುತ್ತಿದ್ದಾರೆ
Jewels of India Mysuru
ಭಾರತದ ದೊಡ್ಡ ಮತ್ತು ಉತ್ತಮ ಆಭರಣಗಳ ಪ್ರದರ್ಶನ ಹಾಗೂ ಮಾರಾಟ
ಸ್ಥಳ: @ ಹೊಟೆಲ್ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ, ಎಂ.ಜಿ ರಸ್ತೆ, ಮೈಸೂರು.
Valet Parking Available
ಪ್ರದರ್ಶನ ದಿನಾಂಕ: ಸೆಪ್ಟೆಂಬರ್ 1, 2 ಮತ್ತು 3, 2017.
ಶುಕ್ರವಾರ, ಶನಿವಾರ, ಭಾನುವಾರ – ಬೆಳಗ್ಗೆ 10.00 ರಿಂದ ರಾತ್ರಿ 8.00ರ ವರೆಗೆ

ಇನ್ನು ಕೇವಲ 2 ದಿನಗಳು ಮಾತ್ರ
Organisers: EXPOWORLD
A Jewellery Shopping Experience of a Life Time
Cut here and bring this free pass for Exhibition Entry for four
FREE ENTRY PASS ADMIT FOUR
September 1, 2 & 3, 2017
@ Hotel Radisson Blu Plaza, MG Road, Mysore. (Next to Mall of Mysore)
Jewels of India Mysuru
Organisers: EXPOWORLD
Lucky Draw WIN a Diamond Ring
Fill and Drop this Coupon at the EXPOWORLD Help Desk
Name:
Address:
Mob:

ಭೂವಿವಾದ: ಮಹಿಳೆಯರಿಂದ ವ್ಯಕ್ತಿ ಕೊಲೆ

ಕುಡುಗೋಲಿನಿಂದ ಕೊಚ್ಚಿ ಕೊಂದರು; ಬೋಗಾದಿ ಬಳಿ ಘಟನೆ

ಮೈಸೂರು,ಸೆ.೧– ಜಮೀನು ವಿವಾದದಲ್ಲಿ ವ್ಯಕ್ತಿಯೊಬ್ಬನನ್ನು ಇಬ್ಬರು ಮಹಿಳೆಯರು ಕುಡುಗೋಲಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ನಗರದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ. ಬೋಗಾದಿ ಬಳಿ ದಾಸನಕೊಪ್ಪಲು ನಿವಾಸಿ ಲೋಕೇಶ್ (೫೦) ಕೊಲೆಯಾದ ವ್ಯಕ್ತಿ. ತಮಿಳುನಾಡು ಮೂಲದ ಶಿವಮ್ಮ ಹಾಗೂ ಶೋಭಾ ಎಂಬವರೇ ಕೊಲೆ ಆರೋಪಿಗಳು.

ಲೋಕೇಶ್

ಘಟನೆ ವಿವರ: ತಮಿಳುನಾಡು ಮೂಲದ ಕೊಲಾಸೊ ಎಂಬವರು ಬೋಗಾದಿ ಬಳಿ ಜಮೀನು ಹೊಂದಿದ್ದು, ಅದನ್ನು ನೋಡಿಕೊಳ್ಳುವುದಕ್ಕಿಂದೇ ಹಲವು ವರ್ಷಗಳ ಹಿಂದೆಯೇ ತಮಿಳುನಾಡಿನಿಂದ ಶಿವಮ್ಮ ಎಂಬವರನ್ನು ಕರೆತಂದು ಜಮೀನನ್ನು ೨ ಭಾಗಗಳಾಗಿ ವಿಂಗಡಿಸಿ ದಾಸನಕೊಪ್ಪಲಿನ ಲೋಕೇಶ್ ಎಂಬವರ ಸಹೋದರಿ ಶಾಂತರಾಜು ಹಾಗೂ ನಾಸಿರ್‌ಸಾಬ್ ಎಂಬವರಿಗೆ ಮಾರಾಟ ಮಾಡಿದ್ದರು. ಜಮೀನು ವಶಕ್ಕೆ ಪಡೆಯುವ ವೇಳೆ ಶಿವಮ್ಮ ಜಮೀನಿನಲ್ಲಿ ತಮಗೂ ಪಾಲು ಬರಬೇಕೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ಬಗ್ಗೆ ನಾಸಿರ್ ಹಾಗೂ ಶಾಂತ ರಾಜು ಅವರೂ ಪ್ರತಿಯಾಗಿ ದಾವೆ ಹೂಡಿದ್ದರು.

ನ್ಯಾಯಾಲಯ ೨ ದಿನಗಳ ಹಿಂದೆ ನಾಸಿರ್ ಪರ ತೀರ್ಪು ನೀಡಿತ್ತು. ಆದರಂತೆ ನಾಸಿರ್ ಕಡೆಯವರು ಜಮೀನು ವಶಕ್ಕೆ ಪಡೆಯುವ ಸಂಬಂಧ ಶುಕ್ರವಾರ ಬಂದಾಗ ಶಾಂತರಾಜು ಅವರ ಸಹೋದರ ಲೋಕೇಶ್ ಕೂಡ ಸ್ಥಳಕ್ಕೆ ಬಂದಿದ್ದರು.

೮

ಮಂಡ್ಯದಲ್ಲಿ ಕತ್ತು ಕೊಯ್ದು ವ್ಯಕಿ ಬರ್ಬರ ಹತ್ಯೆ

ಮಂಡ್ಯ: ಚಾಕುವಿನಿಂದ ವ್ಯಕ್ತಿಯ ಕತ್ತು ಕೊಯ್ದು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ಚಿಕ್ಕೊನಹಳ್ಳಿ ಗೇಟ್ ಬಳಿ ಜರುಗಿದೆ. ಚಿಕ್ಕೊನಹಳ್ಳಿಯ ದಿ.ನಂಜೇಗೌಡ ಅವರ ಪುತ್ರ ಚಿಕ್ಕತಿಮ್ಮಯ್ಯ (೪೫) ಹತ್ಯೆಗೀಡಾದ ವ್ಯಕ್ತಿ. ಮದ್ದೂರು–ಕೊಪ್ಪ ಮಾರ್ಗದ ಅವರ ಜಮ